# ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ : 139 / 2018

ಪಿರ್ಯಾದುದಾರರು :     ಕುದೂರು ಪೋಲಿಸ್ ಠಾಣೆ

**ವಿರುದ್ಧ**

**ಆರೋಪಿ :     ಶಹಬಾಜ್ ಖಾನ್**

**ಚಾಸಾ :- 01 / ಪ್ರಾಸಾ :- 02**

| | |
|---|---|
| ಹೆಸರು | **ಗಂಗರಾಜು** |
| ತಂದೆಯ / ಗಂಡನ ಹೆಸರು | **ನರಸಪ್ಪ ಲೇಟ್** |
| ವಯಸ್ಸು | **53** |
| ಉದ್ಯೋಗ | **ವ್ಯವಸಾಯ** |
| ವಿಳಾಸ | **ಕೋರಮಂಗಲ, ಸೋಲೂರು ಹೋಬಳಿ** |

**ದಿನಾಂಕ: 07-09-2019 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** :- **ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ** :-

ದಿನಾಂಕ: 24-10-2016 ರಂದು ಬೆಳಿಗ್ಗೆ 11.25 ರ ಸಮಯದಲ್ಲಿ ನನ್ನ ಕೆಲಸವನ್ನು ಮುಗಿಸಿ ಸೋಲೂರಿನಿಂದ ನನ್ನ ಊರಿಗೆ ಹೋಗಲು ಹೋಗುತ್ತಿದ್ದಾಗ ಸದರಿ ಸಮಯದಲ್ಲಿ ಬಸ್ ನಿಲ್ದಾಣದ ಬಳಿ ನಮ್ಮ ಊರಿನವರಾದ ಗುಂಡಮ್ಮನವರು ಕೆ.ಎಸ್.ಆರ್.ಟಿ.ಸಿ. ಬಸ್ಸು ಇಳಿದು, ಸೋಲೂರು ಕಡೆಗೆ ಹೋಗಲು ರಸ್ತೆಯನ್ನು ದಾಟುತ್ತಿದ್ದಾಗ ನೆಲಮಂಗಲ ಕಡೆಯಿಂದ ಒಂದು ಪಲ್ಸರ್ ಬೈಕ್ ಕೆಎ-54-ಜೆ-1976 ದ್ವಿಚಕ್ರವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು

ಬಂದು ರಸ್ತೆ ದಾಟುತ್ತಿದ್ದ ಗುಂಡಮ್ಮನವರಿಗೆ ಡಿಕ್ಕಿ ಪಡಿಸಿದ ಪರಿಣಾಮ ಗುಂಡಮ್ಮನವರಿಗೆ ತಲೆಗೆ, ಕೈ ಕಾಲುಗಳಿಗೆ ತೀವ್ರ ಸ್ವರೂಪದ ರಕ್ತಗಾಯಗಳಾಗಿದ್ದು, ಅವರನ್ನು ನಾವು ನೆಲಮಂಗಲದ ಸರ್ಕಾರಿ ಆಸ್ಪತ್ರೆಗೆ ಅಂಬುಲೆನ್ಸ್ ಮೂಲಕ ಕರೆದುಕೊಂಡು ಹೋಗಿದ್ದು, ತದ ನಂತರ ಗುಂಡಮ್ಮನವರ ಸಂಬಂಧಿಕರಿಗೆ ನಾನು ಕರೆ ಮಾಡಿ ಕರೆಯಿಸಿದ್ದು, ಅವರುಗಳು ಬಂದ ನಂತರ ನೆಲಮಂಗಲ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರ ಸಲಹೆ ಮೇರೆಗೆ ಹೆಚ್ಚಿನ ಚಿಕಿತ್ಸೆಗಾಗಿ ನಿಮಾನ್ಸ್ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದು, ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಗುಂಡಮ್ಮನವರು ಮೃತಪಟ್ಟಿರುತ್ತಾರೆ. ಅಪಘಾತವನ್ನು ನಾನು ಕಣ್ಣಾರೆ ಕಂಡಿರುತ್ತೇನೆ. ಅಪಘಾತದ ವಿಚಾರವಾಗಿ ನಾನು ಪಲ್ಸರ್ ಬೈಕ್ ಕೆಎ-54-ಜೆ-1976 ದ್ವಿಚಕ್ರ ವಾಹನ ಚಾಲಕನ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಳ್ಳುವಂತೆ ದೂರು ನೀಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸುವಂತೆ ಕೇಳಿದಾಗ ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ದಾಖಲಾತಿ ದೂರು ಆಗಿದ್ದು, ದೂರನ್ನು ನಿಪಿ-8 ಎಂದು, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

2. ಕುದೂರು ಪೋಲಿಸರು ನಿಪಿ-8 ರ ಆಧಾರದ ಮೇಲೆ ಅಪಘಾತ ನಡೆದ ಸ್ಥಳಕ್ಕೆ ಮಾರನೇ ದಿವಸ ಭೇಟಿ ನೀಡಿದ್ದು, ಸದರಿ ಸ್ಥಳವನ್ನು ನಾನು ತೋರಿಸಿದ್ದು, ಪೋಲಿಸರು ನನ್ನ ಸಮಕ್ಷಮ ಮಧ್ಯಾಹ್ನ 12.30 ರಿಂದ 2.30 ಗಂಟೆಯವರೆಗೆ ಮಹಜರ್ ಕ್ರಮ ಅನುಸರಿಸಿ, ಮಹಜರ್ ಕಾಲಕ್ಕೆ ಅಪಘಾತ ಪಡಿಸಿದ ಪಲ್ಸರ್ ಬೈಕ್ ಕೆಎ-54-ಜೆ-1976 ದ್ವಿಚಕ್ರ ವಾಹನ ಅಮಾನತು ಪಡಿಸಿಕೊಂಡಿರುತ್ತಾರೆ. ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಿ ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸುವಂತೆ ಕೇಳಿದಾಗ ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ದಾಖಲಾತಿ

ಮಹಜರ್ ಆಗಿದ್ದು, ಮಹಜರ್ ನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಅಪಘಾತ ಪಡಿಸಿದ ಪಲ್ಸರ್ ಬೈಕ್ ಕೆಎ-54-ಜೆ-1976 ದ್ವಿಚಕ್ರ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಅಪಘಾತ ಪಡಿಸಿದ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ, ಈ ದಿವಸ ಆರೋಪಿ ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದು, ಆತನನ್ನು ನೋಡಿ ಗುರುತಿಸಲು ಆರೋಪಿತರ ಪರ ವಕೀಲರು ಯಾವುದೇ ತಕರಾರು ಸಲ್ಲಿಸಿರುವುದಿಲ್ಲ, ಆದ ಕಾರಣ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆಂದು ನುಡಿಯುತ್ತಾರೆ. ಅಪಘಾತ ಪಡಿಸಿದ ಪಲ್ಸರ್ ಬೈಕ್ ಕೆಎ-54-ಜೆ-1976 ದ್ವಿಚಕ್ರ ವಾಹನದ ಎರಡು ಪೋಟೋಗಳನ್ನು ಈಗಾಗಲೇ ನಿಪಿ-2 ಮತ್ತು ನಿಪಿ-3 ಎಂದು ಗುರುತಿಸಲಾಗಿದ್ದು, ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು** :- **ಶ್ರೀಮತಿ. ಎಸ್.ಎನ್.ಆರ್.** ವಕೀಲರಿಂದ **ಆರೋಪಿ** ಪರವಾಗಿ :-

ನಾನು ವೃತ್ತಿಯಲ್ಲಿ ವ್ಯವಸಾಯಗಾರನಾಗಿರುತ್ತೇನೆ. ನಾನು ಬಿ.ಎ. ಪದವೀಧರನಾಗಿರುತ್ತೇನೆ. ನಿಪಿ-8 ದೂರನ್ನು ನನ್ನ ಸಂಬಂಧಿಯಾದ ವಿನೋದ್ ಕುಮಾರನ ಬಳಿ ಬರೆಯಿಸಿರುತ್ತೇನೆ, ಸಾಕ್ಷಿ ಮುಂದುವರೆದು ಸದರಿ ದಿನದಂದು ನಾನು ನನ್ನ ಕನ್ನಡವನ್ನು ಮರೆತ ಕಾರಣ ನಿಪಿ-8 ದೂರನ್ನು ನನ್ನ ಸಂಬಂಧಿಯಿಂದ ಬರೆಯಿಸಿರುತ್ತೇನೆ. ನಿಪಿ-8 ರಲ್ಲಿ ಏನೆಲ್ಲಾ ಬರೆದಿರುತ್ತದೆಂದು ನಾನು ಸಂಪೂರ್ಣವಾಗಿ ಓದಿ ತಿಳಿದುಕೊಂಡಿರುತ್ತೇನೆ. ಅಪಘಾತದ ಸಮಯದಲ್ಲಿ ನಾನು ರಸ್ತೆಯಿಂದ 40 ಅಡಿ ದೂರದಲ್ಲಿ ನಿಂತ್ತಿದ್ದೆನು. ಸಾಕ್ಷಿಗೆ ಕಚ್ಚಾ ನಕ್ಷೆಯನ್ನು ತೋರಿಸಿ ಅಪಘಾತದ ದಿನದಂದು ಯಾವ ಕಡೆಯಿಂದ ಯಾವ ಕಡೆಗೆ ನಡೆದುಕೊಂಡು ಹೋಗುತ್ತಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ಕಚ್ಚಾ ನಕ್ಷೆಯನ್ನು ನೋಡಿ ಸಮುದಾಯ ಆರೋಗ್ಯ ಕೇಂದ್ರ ಸೋಲೂರು ಎಂದು ಬರೆದಿರುವ ಸ್ಥಳವನ್ನು ತೋರಿಸಿ ಅಲ್ಲಿಂದ

ಪೂರ್ವದ ಕಡೆಗೆ ಹೋಗುತ್ತಿದ್ದೆನು ಎಂದು ನುಡಿಯುತ್ತಾರೆ. ನಾನು ಸದರಿ ಸಮಯದಂದು ನನ್ನ ಕಾರನ್ನು ಬಸ್ ನಿಲ್ದಾಣದಲ್ಲಿ ನಿಲ್ಲಿಸಿದ ಕಾರಣ ಅದನ್ನು ತೆಗೆದುಕೊಂಡು ಹೋಗಲು ಕೆ.ಎಸ್.ಆರ್,ಟಿ.ಸಿ. ಬಸ್ ನಿಲ್ದಾಣನಕ್ಕೆ ಹೋಗುತ್ತಿದ್ದೇನು. ಸಮುದಾಯ ಆರೋಗ್ಯ ಕೇಂದ್ರದ ಆವರಣದಲ್ಲಿ ಮತ್ತೊಂದು ಕೃಷಿ ಇಲಾಖೆಯ ಕಟ್ಟಡವಿದ್ದು, ಸದರಿ ಕಚೇರಿಯಲ್ಲಿ ನನ್ನ ವ್ಯಯಕ್ತಿಕ ಕೆಲಸದ ನಿಮಿತ್ತ ಹೋಗಿದ್ದೇನು. ನಿಮ್ಮ ಊರಾದ ಕೋರಮಂಗಲದಿಂದ ಸಮುದಾಯ ಆರೋಗ್ಯ ಕೇಂದ್ರಕ್ಕೆ ನಿಮ್ಮ ಕಾರಿನಲ್ಲಿ ಹೋಗಬಹುದಾಗಿತ್ತು ಎಂದರೆ ಸರಿ, ಸಾಕ್ಷಿ ಮುಂದುವರೆದು ಸಾಮಾನ್ಯವಾಗಿ ನಾನು ನನ್ನ ಕಾರಣನ್ನು ಕೆ.ಎಸ್.ಆರ್,ಟಿ.ಸಿ. ಬಸ್ ನಿಲ್ದಾಣದಲ್ಲಿ ನಿಲ್ಲಿಸಿ ಹೋಗುತ್ತೇನೆಂದು ನುಡಿಯುತ್ತಾರೆ.

2. ಸಮುದಾಯ ಆರೋಗ್ಯ ಕೇಂದ್ರದಿಂದ ಅಪಘಾತವಾದ ಸ್ಥಳಕ್ಕೆ ಸುಮಾರು 100 ಅಡಿ ಅಂತರವಿರುತ್ತದೆಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ರಸ್ತೆ ಮಧ್ಯಭಾಗದಲ್ಲಿ ಸಂಪೂರ್ಣವಾಗಿ ರಸ್ತೆ ವಿಭಜಕವಿದ್ದು, ಆದರೆ ಯಾವುದೇ ಪ್ರತ್ಯೇಕವಾದ ತಿರುವು ಇರುವುದಿಲ್ಲ ಎಂದರೆ ಸಾಕ್ಷಿ ರಸ್ತೆ ವಿಭಜಕವಿದ್ದು, ತಿರುವು ಇಲ್ಲದೇ ಇದ್ದರು ಸಹ ಸಾಮಾನ್ಯವಾಗಿ ಜನ ಸಾಮಾನ್ಯರು ಪಕ್ಕದ ರಸ್ತೆಯಲ್ಲಿ ಸಮುದಾಯ ಆರೋಗ್ಯ ಕೇಂದ್ರವಿರುವ ಕಾರಣ ರಸ್ತೆ ವಿಭಜಕದ ಮೇಲೆಯೇ ನಡೆದುಕೊಂಡು ಹೋಗುತ್ತಾರೆಂದು ನುಡಿಯುತ್ತಾರೆ. ರಸ್ತೆ ವಿಭಜಕದ ಮೇಲೆ ಯಾವುದೇ ಗಿಡಗಳು ಇರುವುದಿಲ್ಲ. ಸಾಮಾನ್ಯವಾಗಿ ರಸ್ತೆ ವಿಭಜಕದ ಮೇಲೆ ಗಿಡಗಳು ಇರುತ್ತದೆಂದರೆ ಸಾಕ್ಷಿ ಇರುವುದಿಲ್ಲವೆಂದು ನುಡಿಯುತ್ತಾರೆ. ನೀವು ಪಲ್ಸರ್ ದ್ವಿಚಕ್ರ ವಾಹನವನ್ನು ಎಷ್ಟು ದೂರದಿಂದ ನೋಡಿರುತ್ತೀರಿ ಎಂದರೆ ಸಾಕ್ಷಿ ಸದರಿ ವಾಹನ ಗುಂಡಮ್ಮನವರಿಗೆ ಡಿಕ್ಕಿ ಪಡಿಸಿದ ಶಬ್ದ ಕೇಳಿ ನಾನು ತಕ್ಷಣ ಅಲ್ಲಿಗೆ ಹೋಗಿರುತ್ತೇನೆಂದು ನುಡಿಯುತ್ತಾರೆ. ಗುಂಡಮ್ಮನವರು ಬಸ್ಸನ್ನು ಎಷ್ಟು

ಗಂಟೆಯಲ್ಲಿ ಇಳಿದಿರುತ್ತಾರೆಂದು ನಾನು ನೋಡಿರುವುದಿಲ್ಲ. ಗುಂಡಮ್ಮನವರು ತಮ್ಮ ಅಜಾಗರೂಕತೆ ಹಾಗೂ ನಿರ್ಲಕ್ಷತೆಯಿಂದ ಸಂಚಾರಿ ನಿಯಮವನ್ನು ಪಾಲಿಸದೇ ರಸ್ತೆ ದಾಟುತ್ತಿರುವಾಗ ಸದರಿಯವರೇ ಅಪಘಾತವನ್ನುಂಟು ಮಾಡಿಕೊಂಡಿರುತ್ತಾರೆಂದರೆ ಸರಿಯಲ್ಲ. ರಸ್ತೆ ಮಧ್ಯದಲ್ಲಿ ಯಾವುದೇ ಜಿಬ್ರಾ ಕ್ರಾಸಿಂಗ್ ಇರಲಿಲ್ಲ.

3. ಸಮುದಾಯ ಆರೋಗ್ಯ ಕೇಂದ್ರದ ಆವರಣದಲ್ಲಿರುವ ಕೃಷಿ ಇಲಾಖೆಗೆ ಕೆಲಸದ ಬಾಬ್ತು ಹೋಗಿರುವ ವಿಚಾರ ಹಾಗೂ ದೂರನ್ನು ನೀಡುವ ಸಮಯದಲ್ಲಿ ಕನ್ನಡಕವನ್ನು ಮರೆತ ಕಾರಣ ಸಂಬಂಧಿಯಿಂದ ದೂರು ಬರೆಯಿಸಿರುವ ಬಗ್ಗೆ ದೂರಿನಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ. ಗುಂಡಮ್ಮನವರನ್ನು ನೆಲಮಂಗಲದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಲು ನಾನು ಸಹ ಹೋಗಿರುತ್ತೇನೆ. ಗುಂಡಮ್ಮ ನಮ್ಮ ಗ್ರಾಮದವರು. ಅಪಘಾತದ ದಿನದಂದು ನೀವು ಸ್ಥಳದಲ್ಲಿ ಇರಲಿಲ್ಲ ಹಾಗೂ ಅಪಘಾತವನ್ನು ಕಣ್ಣಾರೆ ಕಂಡಿರುವುದಿಲ್ಲ, ಮೃತ ಗುಂಡಮ್ಮನವರು ನಿಮ್ಮ ಗ್ರಾಮದವರಾದ ಕಾರಣ ಅವರ ಕುಟುಂಬಕ್ಕೆ ಅಪಘಾತ ಪರಿಹಾರ ಕೊಡಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಅಪಘಾತ ಸ್ಥಳದ ಸುಮಾರು 80 ಅಡಿ ಮುಂದೆ ಪೂರ್ವ ದಿಕ್ಕಿಗೆ ಸೋಲೂರು ಕಡೆಗೆ ಹೋಗಲು ವಿಭಜಕವಿರುತ್ತದೆ ಹಾಗೂ ಸಿಗ್ನಲ್ ಇರುತ್ತದೆಂದರೆ ಸಾಕ್ಷಿ ಸುಮಾರು 200 ಅಡಿ ಮುಂದೆ ಇರುತ್ತದೆಂದು ನುಡಿಯುತ್ತಾರೆ. ಸಾಮಾನ್ಯವಾಗಿ ಸೋಲೂರಿಗೆ ಹೋಗಲು ಈ ಮೇಲೆ ಹೇಳಿದ ದಿಕ್ಕಿನಿಂದ ಚಲಿಸುತ್ತಾರೆಂದರೆ ಸರಿ, ಸಾಕ್ಷಿ ಮುಂದುವರೆದು ಸಮುದಾಯ ಆರೋಗ್ಯ ಕೇಂದ್ರಕ್ಕೆ ಹೋಗುವವರು ಹತ್ತಿರವಾಗುತ್ತದೆಂದು ರಸ್ತೆ ವಿಭಜಕ ದಾಟಿ ಹೋಗುತ್ತಾರೆಂದು ನುಡಿಯುತ್ತಾರೆ. ಅಪಘಾತ ಪಡಿಸಿದ ಸ್ಥಳದಲ್ಲಿ ಯಾವುದೇ ಬಸ್ ನಿಲ್ದಾಣ ಇರುವುದಿಲ್ಲ ಎಂದರೆ ಸರಿಯಲ್ಲ.

**ಸಿ.ಸಿ. ಸಂಖ್ಯೆಃ 139 / 2018**
**ಚಾಸಾ-01 / ಪ್ರಾಸಾ-02**

4. ನಿಪಿ-1 ಮಹಜರ್ ಕ್ರಮ ಅನುಸರಿಸುವ ಸಮಯದಲ್ಲಿ ಸುಮಾರು 5-6 ಜನ ಇದ್ದರು, ಅವರುಗಳಲ್ಲಿ ಇಬ್ಬರು ಗೊತ್ತಿರುತ್ತಾರೆ, ಉಳಿದವರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಿಪಿ-1 ಮಹಜರ್ ಕ್ರಮವನ್ನು ಮಧ್ಯಾಹ್ನ 12.30 ರಿಂದ 2.30 ರವರೆಗೆ ಪೋಲಿಸರು ಜರುಗಿಸಿರುತ್ತಾರೆಂದು ನುಡಿಯುತ್ತಾರೆ. ನಿಪಿ-1 ಮಹಜರ್ ನಲ್ಲಿ ಏನೆಲ್ಲಾ ಅಂಶಗಳು ಬರೆದಿರುತ್ತದೆಂದು ಗೊತ್ತಿರುತ್ತದೆಯಾ ಎಂದರೆ ಸಾಕ್ಷಿ ಪೋಲಿಸರು ಮಹಜರ್ ಬರೆದ ನಂತರ ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆಂದು ನುಡಿಯುತ್ತಾರೆ. ಪೋಲಿಸರು ನಿಪಿ-1 ಮಹಜರ್ ಕ್ರಮ ಅನುಸರಿಸಲು ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ, ನೀವು ಸ್ಥಳದಲ್ಲಿ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**